1. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ (5 ಮತ್ತು 6)- 500 ಮೆ.ವ್ಯಾ.
2. ಹೊಸಪೇಟೆ ಶಾಖೋತ್ಪನ್ನ ವಿದ್ಯುತ್ ಕೇಂದ್ರ. 1500 ಮೆ.ವ್ಯಾ.
3. ಮಂಗಳೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ 1000 ಮೆ.ವ್ಯಾ.

ವಿಷಯ : ಪುತ್ತೂರು ತಾಲ್ಲೂಕಿನ ಕೋರ್ಟ್ ಸಮುಚ್ಛಯದ ಕಾಮಗಾರಿ ಕೆಲಸ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 138(458)

ಶ್ರೀ. ಡಿ.ವಿ. ಸದಾನಂದಗೌಡ (ಪುತ್ತೂರು)

ಮಾನ್ಯ, ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪತ್ತೂರು ವಿಧಾನ ಸಭಾ ಕ್ಷೇತ್ರದ ಪತ್ತೂರಿನ ಕೋರ್ಟ್ ಸಮುಚ್ಛಯದ ಕಟ್ಟಡ ಕಾಮಗಾರಿಗೆ ಅಂದಾಜು ವೆಚ್ಚ ಎಷ್ಟು ಮತ್ತು ಅದರ ಕಟ್ಟಡದ ಪೂರ್ಣಗೊಳಿಸುವ ಅವಧಿ ಎಷ್ಟು?

ಶ್ರೀ ಶಿವಾನಂದ ಎಚ್. ಕೌಜಲಗಿ
ಲೋಕೋಪಯೋಗಿ ಸಚಿವರು.

ಅ) ಪತ್ತೂರಿನ ಕೋರ್ಟ್ ಸಮುಚ್ಛಯದ ಕಟ್ಟಡದ ಅಂದಾಜು 41.40 ಲಕ್ಷ ರೂ.ಗಳಾಗಿದೆ. ಸದರಿ ಕಾಮಗಾರಿ ದಿನಾಂಕ 13.3.1991ರಂದು 41.40ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಸಮ ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡಿದೆ. ಗುತ್ತಿಗೆದಾರರಿಗೆ ದಿನಾಂಕ 9.1.1992ರಂದು ನಿವೇಶನವನ್ನು ಹಸ್ತಾಂತರಿಸಿದ್ದು ಗುತ್ತಿಗೆ ಕರಾರಿನಂತೆ ಮಳೆಗಾಲವನ್ನು ಹೊರತುಪಡಿಸಿ ಇಪ್ಪತ್ತ ನಾಲ್ಕು ತಿಂಗಳುಗಳ ಒಳಗಾಗಿ ಕಾಮಗಾರಿಯನ್ನು ಮುಗಿಸಬೇಕಾಗಿರುತ್ತದೆ.

ಕಟ್ಟಡದ ನಿರ್ಮಾಣ ಕಾರ್ಯ ಮುಗಿದಿರುತ್ತದೆ. ಬಣ್ಣ ನೀರು ಸರಬರಾಜು, ವಿದ್ಯುತ್ ಒದಗಿಸುವುದು ಮುಂತಾದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಎಲ್ಲಾ ಕಾಮಗಾರಿಗಳನ್ನು ಮೇ 1995ರೊಳಗಾಗಿ ಪೂರ್ಣಗೊಳಿಸಲು ಯೋಚಿಸಲಾಗಿದೆ.